ಸಾಕ್ಷಿಯನ್ನು ದಿ: 21.01.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-2

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ:-**

1. ನಾನು ಎಂಟನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಮತ್ತು 2 ನೇ ಪ್ರತಿವಾದಿ ಅಣ್ಣತಮ್ಮಂದಿರಾಗಿದ್ದು, ಅವರಿಗೆ ಇನ್ನೂ ಇಬ್ಬರು ಸಹೋದರರು ಇರುತ್ತಾರೆ. ಸದರಿಯವರ ಹೆಸರು ಗೊತ್ತಿಲ್ಲ. ದಾವಾ ಆಸ್ತಿ ಪ್ರತಿವಾದಿಗೆ ವಿಭಾಗದಲ್ಲಿ ಬಂದಿರುತ್ತದೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ ಆದರೆ ಅದು ಪ್ರತಿವಾದಿಗೆ ಮಂಜೂರಾಗಿರುತ್ತದೆ. ನನ್ನ ಮುಖ್ಯ ವಿಚಾರಣೆ ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವ ವಿಚಾರ ಸುಳ್ಳು ಎಂದರೆ ಸರಿ. ನಾನು ವಾದಿ ಪ್ರತಿವಾದಿಗೆ ಸಂಬಂಧಿಕನಾಗಬೇಕೆಂದರೆ ಸರಿಯಲ್ಲ. ಹಳೆಯ ಮನೆಯಲ್ಲಿ ವಾದಿ ಮತ್ತು 2 ನೇ ಪ್ರತಿವಾದಿ ಅರ್ಧ ಹಿಸ್ಸಾ ಮಾಡಿಕೊಂಡು ವಾಸವಾಗಿದ್ದಾರೆಂದರೆ ಸರಿ. ಈಗಲೂ ಸಹ ಪ್ರತಿವಾದಿಗಳು ಸದರಿ ಹಳೆಯ ಮನೆಯಲ್ಲಿ ಕುಟುಂಬ ಸಮೇತ ಅವರ ಭಾಗದಲ್ಲಿ ವಾಸ ಮಾಡುತ್ತಿದ್ದಾರೆಂದರೆ ಸರಿ. ಅದೇ ರೀತಿ ವಾದಿಯು ಸಹ ಅವರ ಭಾಗದ ಮನೆಯಲ್ಲಿ ಕುಟುಂಬ ಸಮೇತ ವಾಸ ಮಾಡುತ್ತಾರೆಂದರೆ ಸರಿ. ವಾದಿ ಖಾಲಿ ಜಾಗದ ಕುರಿತು ದಾವೆ ಸಲ್ಲಿಸಿರುತ್ತಾರೆ ಅದರ ನಂಬರ್ 412. ದಾವಾ ಆಸ್ತಿ ಪ್ರತಿವಾದಿಗೆ ಮಂಡಲ ಪಂಚಾಯಿತಿಯಿಂದ ಮಂಜೂರಾಗಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಮಂಜೂರಾತಿ ಬಗ್ಗೆ ತಿಳಿಸಿರುತ್ತೇನೆ. ದಾವ ಆಸ್ತಿ ಪ್ರತಿವಾದಿ ಹೆಸರಿಗೆ ಇರುವ ಕುರಿತು ದಾಖಲಾತಿ ನೋಡಿಲ್ಲ. ದಾವಾ ಆಸ್ತಿ ಮಾದಯ್ಯನಿಗೆ ವಿಭಾಗದ ಮುಖಾಂತರ ಬಂದು ಕಲ್ಲುಣಿ ಪಂಚಾಯಿತಿಯಲ್ಲಿ ಖಾತೆಯಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಯೇ ಅನುಭೋಗದಲ್ಲಿದ್ದಾರೆಂದರೆ ಸಾಕ್ಷಿಯು ಅವರು ಇರಗಿವುದಿಲ್ಲ. ಈಗ ಮಹದೇವಪುರದಲ್ಲಿ ವಾಸ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ಮಹದೇವಪುರ ವಾದಿ ಹೆಂಡತಿಯ ಗ್ರಾಮವಾಗಿರುತ್ತದೆ ಎಂದರೆ ಸರಿ. ವಾದಿ ದಾವ ಸ್ವತ್ತಿನಲ್ಲಿ ಅನುಭೋಗದಲ್ಲಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಬೊಕ್ಕನ ಸಿದ್ದನ ಮನೆ ಎಂದರೆ ಸರಿ. ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ದಾಸಯ್ಯನ ಹೊಂಬಾಳಮ್ಮ ಮತ್ತು ಕೆಂಚಯ್ಯನ ನಿವೇಶನ ಎಂದರೆ ಸರಿ. ದಾವಾ ಆಸ್ತಿಗೆ ದಾಖಲಾತಿಗಳನ್ನು ಮತ್ತು ಚೆಕ್ಕುಬಂದಿಯನ್ನು ಸೃಷ್ಠಿ ಮಾಡಿ ಪ್ರತಿವಾದಿಗಳು ವಾದಿಯ ಸ್ವಾಧೀನಕ್ಕೆ ತೊಂದರೆ

ಕೊಡತ್ತಿದ್ದಾರೆಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಎಷ್ಟು ಆಸ್ತಿಗಳು ಇರುತ್ತವೆ ಗೊತ್ತಿಲ್ಲ. ವಾದಿಗೆ ಎಷ್ಟು ಆಸ್ತಿಗಳು ಇರುತ್ತವೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಪಂಚಾರಯಿತಿಯಿಂದ ಕೊಟ್ಟಿರುವ ಒಂದು ನಿವೇಶನ ಇರುತ್ತದೆ. ಪಂಚಾಯಿತಿ ಕೊಟ್ಟಿರುವ ಆಸ್ತಿಯೇ ಬೇರೆ ಮತ್ತು ದಾರವಾ ಆಸ್ತಿಯೇ ಬೇರೆ ಎಂದರೆ ಸರಿ. ಪ್ರತಿವಾದಿಗೆ ಪಂಚಾಯಿತಿಯವರು ಮಂಜೂರು ಮಾಡಿದ ನಿವೇಶನವನ್ನೇ ದಾವಾ ಆಸ್ತಿ ಎಂದು ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆಂದರೆ ಸರಿಯಲ್ಲ. ಪ್ರತಿವಾದಿಯರು ತೊಂದರೆ ಕೊಟ್ಟ ಬಗ್ಗೆ ವಾದಿ ಕಿರುಗಾಗಲು ಪೋಲೀಸ್ ಠಾಣಾಗೆ ದೂರು ಕೊಟ್ಟಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಪಂಚಾಯಿತಿಯ ಸದಸ್ಯರಾಗಿದ್ದರು ಎಂದರೆ ಸರಿ. ಪಂಚಾಯಿತಿಯಲ್ಲಿ 1 ನೇ ಪ್ರತಿವಾದಿ ತಮ್ಮ ಪ್ರಭಾವ ಬಳಸಿ ದಾಖಲಾತಿಯನ್ನು ಸೃಷ್ಠಿ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯಲ್ಲಿ ಬೆಳೆದಂತ ಬೆಳೆಯನ್ನು ಹಾಕಿಕೊಂಡು ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ವಾದಿ ಅನುಭವದಲ್ಲಿರುವ ಆಸ್ತಿಯಲ್ಲಿ ಪ್ರತಿವಾದಿಯರು ಅನುಭೋಗದಲ್ಲಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ತಮ್ಮ ಭಾಗಕ್ಕೆ ಬಂದ ಮನೆಯಲ್ಲಿ ಹಬ್ಬ ಹರಿದಿನಕ್ಕೆ ಬಂದು ಹಬ್ಬವನ್ನು ಆಚರಿಸುತ್ತಾರೆಂದರೆ ಸರಿಯಲ್ಲ. ವಾದಿ ಮಹದೇವಪುರದಲ್ಲಿ ವಾಸ ಮಾಡುತ್ತಿರುವುದನ್ನು ದುರುಪಯೋಗ ಪಡಿಸಿಕೊಂಡು ದಾವಾ ಆಸ್ತಿ ಲಪಟಾಯಿಸಲು ಪ್ರತಿವಾದಿಗಳ ಜೊತೆ ಸೇರಿ ಸುಳ್ಳು ಸಾಕ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ನಾವು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇವೆಂದು ಹೇಳು ಎಂದು ಹೇಳಿದ್ದರಿಂದ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗೆ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಯಾವ ಆಸ್ತಿ ಪ್ರತಿವಾದಿಗೆ ಸೇರಿದ ಆಸ್ತಿಯೆಂದು ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಯಾವ ಆಸ್ತಿಯಲ್ಲಿ ಪ್ರತಿವಾದಿಯರು ಸ್ವಾಧೀನದಲ್ಲಿದ್ದಾರೆಂದು ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಮತ್ತು ನಾನು ಚೆನ್ನಾಗಿದ್ದೇವೆಂದರೆ ಸರಿ. ಪ್ರತಿವಾದಿಯರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಧ್ಯವಾದರೆ ವಾದಿಯ ಆಸ್ತಿ ಲಪಟಾಯಿಸಲು ಸುಳ್ಳು

ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿ ಲಪಟಾಯಿಸಲು ವಾದಿಗೆ ತೊಂದರೆ ಕೊಟ್ಟಿರುತ್ತಾರೆಂದು ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ